**ಸಾಕ್ಷಿಗೆ ದಿನಾಂಕಃ22-06-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. BPR ವಕೀಲರಿಂದ ::**

ನಮ್ಮ ಕುಟುಂಬಸ್ಥರನ್ನು ಅತ್ತಿಗನಾಳು ಮನೆಯವರು ಎಂದು ಕರೆಯುತ್ತಾರೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಸಿದ್ದಪ್ಪ ಆಗಿರುತ್ತದೆ. ನನ್ನ ಅಜ್ಜ ಸಿದ್ದಪ್ಪನಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಅವರುಗಳ ಹೆಸರು ರೇವಣಸಿದ್ದಪ್ಪ, ಗಂಗಾಧರಪ್ಪ ಮತ್ತು ಬಸಮ್ಮ ಎಂದರೆ ಸರಿ. ಮೇಲೆ ಹೇಳಿದ ಗಂಗಾಧರಪ್ಪ ರವರ ಹೆಂಡತಿ ಮತ್ತು ಮಗಳು ಈ ದಾವೆಯ ವಾದಿಗಳಾಗಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ಬಸಮ್ಮ ರವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ನಾನು 8 ನೇ ತರಗತಿಯವರೆಗೂ ಕೋರನಹಳ್ಳಿ/ಚೋಳಹಿರಿಯೂರಿನಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ  ದಾಖಲಾತಿಗಳು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಮ್ಮ ತಂದೆಗೆ ನಾವು 5 ಜನ ಮಕ್ಕಳು ಇರುತ್ತೇವೆ. ನನ್ನ ತಾಯಿ ಗೌರಮ್ಮ ಜೀವಂತವಾಗಿರುತ್ತಾರೆ. ನನ್ನ ತಾಯಿ ನನ್ನ ಜೊತೆ ವಾಸವಾಗಿರುತ್ತಾರೆ.

ನನ್ನ ತಂದೆ 31.01.1991 ರಲ್ಲಿ ಮೃತರಾಗಿರುತ್ತಾರೆ. ನನ್ನ ಚಿಕ್ಕಪ್ಪ ಗಂಗಾಧರಪ್ಪ ರವರು ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಕೋರನಹಳ್ಳಿ ಗ್ರಾಮದಲ್ಲಿ ವಾಸಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ಸ್ವಲ್ಪ ಸಮಯ ಕೋರನಹಳ್ಳಿಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಕೋರನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಾರ ಎಂದರೆ ಸಾಕ್ಷಿಯು 2 ನೇ ವಾದಿಯ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.  2 ನೇ ವಾದಿಯು ಅಂಗನವಾಡಿಯಲ್ಲಿ ಅಡುಗೆ ಮಾಡುವ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಯಾವ ರೀತಿ ಕುಟುಂಬದ ನಿರ್ವಹಣೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಐಟಂ 1 ಮತ್ತು 2 ಆಸ್ತಿಗಳು ಮೂಲತಃ ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ.  ದಾವಾ ಐಟಂ 1 ಮತ್ತು 2 ಆಸ್ತಿಗಳನ್ನು ನನ್ನ ತಂದೆ ಹಾಗೂ ಗಂಗಾಧರಪ್ಪ ರವರು 1970 ನೇ ಸಾಲಿನಲ್ಲಿ ಕೋರನಹಳ್ಳಿಯ ರುದ್ರಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆದರೆ ಸದರಿ ರುದ್ರಪ್ಪ ರವರಿಗೆ ಆ ಸಮಯದಲ್ಲಿ ಸದರಿ ಸ್ವತ್ತುಗಳ ಸ್ವಾಧೀನ ಬಿಟ್ಟು ಕೊಟ್ಟಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ಮಾರಾಟ ಮಾಡಿದ್ದರು ನನ್ನ

ತಂದೆ ಹಾಗೂ ಗಂಗಾಧರಪ್ಪ ಇಬ್ಬರು ಸೇರಿ ದಾವಾ ಐಟಂ 1 ಮತ್ತು 2 ಆಸ್ತಿಗಳಲ್ಲಿ ಗುತ್ತಿಗೆ ಹೊಡೆಯುತ್ತಿದ್ದರು ಎಂದರೆ ಸಾಕ್ಷಿಯು ಕೇವಲ ನನ್ನ ತಂದೆ ಮಾತ್ರ ಗುತ್ತಿಗೆ ಹೊಡೆಯುತ್ತಿದ್ದರು ಎಂದು ನುಡಿಯುತ್ತಾರೆ.

ನಿಡಿ5 ಮತ್ತು 6 ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ/ಗಂಗಾಧರಪ್ಪ ರವರು ಒಂದೇ ಮನೆಯಲ್ಲಿ ವಾಸವಾಗಿರುವುದಾಗಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಮತ್ತು ನಾವು ಬೇರೆ ಬೇರೆ ಮನೆಯಲ್ಲಿ ವಾಸ ಮಾಡಿಕೊಂಡಿದ್ದೇವು ಎಂದು ನುಡಿಯುತ್ತಾರೆ. ನಿಡಿ6 ರಲ್ಲಿ ಬೇರೆ ಶಾಹಿಯಲ್ಲಿ ಮನೆ ನಂಬರ್ ಅನ್ನು 55 ಎ ಎಂದು ಬರೆಯಲಾಗಿರುತ್ತದೆ ಎಂದರೆ ನನಗೆ ಅದು ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ5 ಮತ್ತು 6 ರಲ್ಲಿ ಇರುವ ಮನೆ ನಂಬರ್ ಗಳಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿಡಿ5 ಮತ್ತು 6 ರಲ್ಲಿ ನಮೂದಿಸಿರುವ ಮನೆಯು ಒಂದೇ ಮನೆ ಆಗಿರುತ್ತದೆ ಎಂದರೆ ಸರಿಯಲ್ಲ. ಗಂಗಾಧರಪ್ಪ ರವರು ಅವರ ಹಿಸ್ಸೆಗೆ ಬಾರಬೇಕಾದ ಜಮೀನುಗಳ ಭಾಗವನ್ನು ಹಣ ತೆಗೆದುಕೊಂಡು ನನ್ನ ತಂದೆಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೇವಲ ಮನೆಗಳಲ್ಲಿನ ಹಕ್ಕನ್ನು ಆ ರೀತಿ ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಗಂಗಾಧರಪ್ಪ ರವರು ಎಷ್ಟು ಹಣ ಪಡೆದಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಮತ್ತು ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಇರುತ್ತದೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವ್ಯವಹಾರವು ಪಂಚಾಯಿತಿಕೆಯಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿದಾರರು ಬೊಮ್ಮಲಿಂಗಪ್ಪ ಮತ್ತು ಬಸಪ್ಪ ಆಗಿರುತ್ತಾರೆ.

ದಾವಾ ಐಟಂ 1 ಮತ್ತು 2 ನ್ನು ರುದ್ರಪ್ಪ ರವರಿಗೆ ಮಾರಾಟ ಮಾಡಿದ್ದರು ಸದರಿ ಆಸ್ತಿಯನ್ನು ನಾವು ಇವರೆಗೂ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ 1 ಮತ್ತ 2 ಕ್ಕೆ ಸಂಬಂಧಪಟ್ಟಂತೆ ಭೂ ನ್ಯಾಯಾಮಂಡಳಿ ಮುಂದೆ 1976-77 ರಲ್ಲಿ ನನ್ನ ತಂದೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯಕ್ಕೆ ದಾವಾ

ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ರವರ ನಡುವೆ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

1987 ರಲ್ಲಿ ನನಗೆ ಸುಮಾರು 22-23 ವರ್ಷ ಇರಬಹುದು. ನಿಡಿ2 ರಲ್ಲಿ ಇರುವ ವಿಚಾರಗಳು ನನಗೆ ಕಾಣುತ್ತಿವೆ. ನಿಡಿ2 ಕ್ಕೆ ನಾನು ಯಾವ ಕಾರಣಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ಭೂ ನ್ಯಾಯ ಮಂಡಳಿಯ ಆದೇಶದಂತೆ ತೆಗೆದುಕೊಳ್ಳಲು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ2 ರ ದಿನಾಂಕದಂದು ನನ್ನ ತಂದೆ ಜೀವಂತವಾಗಿ ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ನನ್ನ ತಂದೆಗೆ ಹುಷಾರಿರಲಿಲ್ಲ ಎಂದು ನುಡಿಯುತ್ತಾರೆ. ನಿಡಿ2 ರಲ್ಲಿ ನನ್ನ ತಂದೆಯ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ.

ನನ್ನ ತಂದೆ ವಾದಿಗಳಿಗೂ ಸಹ ದಾವಾ ಐಟಂ 1 ಮತ್ತು 2 ರ ಮೇಲೆ ಹಕ್ಕು ಇರುತ್ತದೆ ಎಂದು ನನಗೆ ಹಲವಾರು ಬಾರಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸದರಿ ವಿಚಾರ ತಿಳಿದಿದ್ದರೂ ಸಹ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಗಂಗಾಧರಪ್ಪ ರವರನ್ನು ನಾನು ನೋಡಿ 30-40 ವರ್ಷ ಆಗಿರಬಹುದು. ಸದರಿಯವರು ನಮ್ಮ ಯಾವುದೇ ಕುಟುಂಬದ ಕಾರ್ಯಕ್ರಮಗಳಲ್ಲಿ ನಾನು ಅವರನ್ನು ನೋಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರನ್ನು ನಾನು 1975-76 ರಿಂದ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಮಯದಿಂದ ದಾವಾ ಆಸ್ತಿಗಳಲ್ಲಿನ ಆದಾಯವನ್ನು ನಾವೇ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ವಾದಿಗಳಿಗೆ ನಾವು ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಆದಾಯ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪ ರವರು ಬದುಕಿರುತ್ತಾರೋ ಮೃತರಾಗಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ನನಗೆ ವ್ಯವಸಾಯ ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಆದಾಯದಿಂದ ದಾವಾ ಐಟಂ 3 ನ್ನು ಖರೀದಿ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ನನ್ನ ಸ್ವಂತ ಆದಾಯ ಹಾಗೂ ನನ್ನ

ಹೆಂಡತಿಯ ಒಡವೆಗಳನ್ನು ಮಾರಾಟ ಮಾಡಿ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಇದೇ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿ.

ದಾವಾ ಐಟಂ 1 ಮತ್ತು 2 ನ್ನು ಭೂ ನ್ಯಾಯ ಮಂಡಳಿಯಿಂದ ಮಂಜೂರು ಮಾಡಿದ ಸಮಯದಿಂದ ದಾವಾ ಶೆಡ್ಯೂಲ್ ಸ್ವತ್ತುಗಳು ಎಲ್ಲವು ನಮ್ಮ ಹಾಗೂ ವಾದಿಯ ಒಟ್ಟು ಕುಟುಂಬದ ಸ್ವತ್ತಾಗಿರುತ್ತದ ಎಂದರೆ ಸರಿಯಲ್ಲ. 2 ನೇ ವಾದಿ 5 ವರ್ಷ ಇದ್ದ ಸಮಯದಲ್ಲಿ ಅವರ ತಂದೆ ಮನೆ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಎಷ್ಟು ವರ್ಷ ಇದ್ದಾಗ ಅವರ ತಂದೆ ಮನೆ ಬಿಟ್ಟು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಗಂಗಾಧರಪ್ಪ ರವರು ಅವರ ಮದುವೆ ಸಮಯದಲ್ಲಿ ದಾವಾ ಐಟಂ 1 ಮತ್ತು 2 ಸ್ವತ್ತನ್ನು ನನ್ನ ತಂದೆ ಹಾಗೂ ಗಂಗಾಧರಪ್ಪ ರವರು ಸೇರಿ ಮಾರಾಟ ಮಾಡಿರುತ್ತಾರೆ ಎಂದು ಹೇಳಿರುವ ವಿಚಾರ ಸರಿ ಇರುತ್ತದೆ. ದಾವಾ ಐಟಂ 1 ಮತ್ತು 2 ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ಆದಕಾರಣ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗಳಿಗೆ ಸಮನಾದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವಂತೆ ನಮ್ಮ ಮಧ್ಯೆ ಒಟ್ಟು ಕುಟುಂಬದ ಸ್ವತ್ತು ಇರುವುದಿಲ್ಲ ಎಂದು ಹೇಳುತ್ತಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಗಂಗಾಧರಪ್ಪ ಮನೆ ಬಿಟ್ಟು ಹೋಗುವವರಗೊ ನನ್ನ ತಂದೆ ಹಾಗೂ ಅವರು ಒಟ್ಟಿಗೆ ವಾಸ ಮಾಡಿಕೊಂಡು ದಾವಾ ಐಟಂ 1 ಮತ್ತು 2 ನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೂ ಹಾಗೂ ಗಂಗಾಧರಪ್ಪ ರವರಿಗೆ ಎಷ್ಟು ವರ್ಷಗಳ ವ್ಯತ್ಯಾಸ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಜೀವಂತ ಅವಧಿಯಲ್ಲಿ ಒಟ್ಟು ಕುಟುಂಬದ ಆಸ್ತಿಗಳ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಆಸ್ತಿಗಳ ನಿರ್ವಹಣೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪ ರವರು ಯಾವತ್ತು ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಶೆಡ್ಯೂಲ್ ಸ್ವತ್ತುಗಳಲ್ಲಿ ಪಾಲು ಕೊಡಬೇಕೆನ್ನುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಚಿಕ್ಕಪ್ಪ ಗಂಗಾಧರಪ್ಪ ರವರು ಕಾನೂನಿನ ರೀತಿ ಬದುಕಿರುವುದಿಲ್ಲ ಎಂದು ಘೋಷಣೆ ಮಾಡಲು ನನ್ನ ಯಾವುದೇ ತಕರಾರು ಇರುವುದಿಲ್ಲ ಕಾರಣ ನನಗೂ ಅದಕ್ಕೂ ಯಾವುದೇ ಸಂಬಂಧ ಇರುವುದಿಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: